# ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ : ೧೯೧೫

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪, ೨೨೪೨೩೮೬೭, ೨೬೬೭೨೯೯೨
http://www.kasapa.in e-mail : kannadaparishattu@gmail.com

ಕ್ರಮಸಂಖ್ಯೆ: ಕಸಾಪ/ಆಪ್ತಶಾಖೆ/ದಾಖಲೆ/೨೦೨೨–೨೩ ದಿನಾಂಕ: ೨೨–೦೬–೨೦೨೨

ಇವರಿಗೆ

**ಸಂಪಾದಕರು / ಮುಖ್ಯ ವರದಿಗಾರರು**

.................................................

ಬೆಂಗಳೂರು

ಮಾನ್ಯರೆ,

**ಪತ್ರಿಕಾ/ಟಿ.ವಿ. ಹೇಳಿಕೆ – ಪ್ರಕಟಣೆ ಕೃಪೆಗಾಗಿ**

## "ಮಾನ್ಯ ಮುಖ್ಯಮಂತ್ರಿಗಳ ಯೋಗಾಸನ ಕುರಿತಂತೆ ಸಾಮಾಜಿಕ ಜಾಲತಾಣದಲ್ಲಿ ಅಮಾನವೀಯತೆಯ ಟ್ರೋಲ್‌ಗೆ ಕ.ಸಾ.ಪ. ಖಂಡನೆ"

## – ನಾಡೋಜ ಡಾ. ಮಹೇಶ ಜೋಶಿ

೧. ಮೈಸೂರಿನಲ್ಲಿ ನಿನ್ನೆ (೨೧–೬–೨೦೨೨) ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದ **'ಅಂತರಾಷ್ಟ್ರೀಯ ಯೋಗ ದಿನಾಚರಣೆ'**ಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಬಸವರಾಜ ಬೊಮ್ಮಾಯಿ** ಅವರು ಪಾಲ್ಗೊಂಡು ಯೋಗಾಸನ ನಡೆಸಿದ್ದನ್ನು, ಕೆಲವು ವಿಕೃತ ಮನಸ್ಸುಗಳು ಸಾಮಾಜಿಕ ಜಾಲತಾಣದಲ್ಲಿ ಟ್ರೋಲ್ ಮೂಲಕ ಅಪಹಾಸ್ಯ ಮಾಡುತ್ತಿರುವುದನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ **ನಾಡೋಜ ಡಾ. ಮಹೇಶ್ ಜೋಶಿ** ಅವರು ತೀವ್ರವಾಗಿ ಖಂಡಿಸಿದ್ದಾರೆ.

೨. ಮಾನ್ಯ ಮುಖ್ಯಮಂತ್ರಿಗಳು ಯೋಗ ದಿನಾಚರಣೆ ಪ್ರಯುಕ್ತ ಅವರ ಮೊಣಕಾಲು ನೋವಿನ ನಡುವೆಯೂ ಯೋಗಾಸನ ನಡೆಸುವ ಮೂಲಕ ಜಾಗೃತಿ ಮೂಡಿಸುವ ಹಾಗೂ ಪ್ರೇರಣೆದಾಯಕವಾದ ಕೆಲಸವನ್ನು ಅತ್ಯಂತ ಪ್ರಾಮಾಣಿಕವಾಗಿ ನಿರ್ವಹಿಸಿದ್ದಾರೆ. ಈ ಸಂದರ್ಭದ ಅವರ **ವಿಡಿಯೋ ತುಣಕೊಂದನ್ನು ಅಪಹಾಸ್ಯದ ರೀತಿಯಲ್ಲಿ ಬಿಂಬಿಸುತ್ತಾ, ಸಾಮಾಜಿಕ ಜಾಲತಾಣದಲ್ಲಿ ಟ್ರೋಲ್‌ಗೊಳಿಸಿ, ಅದನ್ನು ವೈರಲ್‌ಗೊಳಿಸುತ್ತಿರುವುದು ಅತ್ಯಂತ ಅಮಾನವೀಯ ಕೃತ್ಯವಾಗಿದೆ.** ಯಾರು ಈ ಕುಕೃತ್ಯವನ್ನು ನಡೆಸುತ್ತಿದ್ದಾರೋ ಅವರ ಮನಸ್ಥಿತಿ ವಿಕೃತವಾಗಿದೆ ಎಂಬುದು ಇದನ್ನು ನೋಡಿದರೆ ತಿಳಿಯುತ್ತದೆ ಎಂದು ನಾಡೋಜ ಡಾ. ಮಹೇಶ ಜೋಶಿ ಅವರು ಖೇದ ವ್ಯಕ್ತಪಡಿಸಿದ್ದಾರೆ.

೩. ಮಾನ್ಯ ಮುಖ್ಯಮಂತ್ರಿಗಳನ್ನು ಗೌರವಿಸದೇ, ಅವರನ್ನು ಅಪಹಾಸ್ಯಗೊಳಿಸಿರುವುದು ಖಂಡನಾರ್ಹವಾದುದ್ದು. ಇಂತಹ ವಿಕೃತ ಮನಸ್ಸಿನಿಂದ ಹೊರಬಂದು, **ಸಮಾಜದಲ್ಲಿ ಸೌಜನ್ಯದಿಂದ, ಎಲ್ಲರನ್ನೂ, ಎಲ್ಲವನ್ನೂ ಗೌರವಿಸುವ ಮನೋಭಾವನೆಯನ್ನು ಹೊಂದಬೇಕು ಹಾಗೂ ಶ್ರಮವಹಿಸುವವರನ್ನು ಉತ್ತೇಜಿಸಿ, ಪ್ರೋತ್ಸಾಹಿಸುವ ಕೆಲಸವನ್ನು ಮಾಡಬೇಕೆಂದು** ಕನ್ನಡ ಸಾಹಿತ್ಯ ಪರಿಷತ್ತು ಬಯಸುತ್ತದೆ ಎಂಬುದಾಗಿ ನಾಡೋಜ ಡಾ. ಮಹೇಶ ಜೋಶಿ ಅವರು ಆಶಿಸಿದ್ದಾರೆ.

(ಶ್ರೀನಾಥ್ ಜೆ.)
ಮಾಧ್ಯಮ ಸಲಹೆಗಾರರು